# ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಶಿವಮೊಗ್ಗ

## ಮುಟ್ಟು ಮುಟ್ಟೆಂದೇಕೆ

**ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ**
**ಮುಟ್ಟಿನಿಂದಲ್ಲವೆ ನಮ್ಮೆಲ್ಲರ ಹುಟ್ಟು**
**ಮುಟ್ಟು ಮುಟ್ಟೆಂದೇಕೆ ಕೀಳರಿಮೆ ಹೊಂದುವಿರಿ**
**ಮುಟ್ಟಲ್ಲವೇ ನಮ್ಮ ಸೃಷ್ಟಿಯ ಗುಟ್ಟು...**

ಹೆಣ್ಣು, ಹೆಣ್ತನ ಎನ್ನುವುದು ರೂಪ ವಿಶೇಷವಷ್ಟೇ ಅಲ್ಲ, ಅದೊಂದು ಭಾವನಾತ್ಮಕ, ದೈಹಿಕ ವಿಶೇಷ. ಮುಟ್ಟಾಗುವವರು, ಆಗದಿರುವವರು, ಮದುವೆಯಾದವರು, ಆಗದವರು, ಮಕ್ಕಳ ಹೆತ್ತವರು, ಹೆರದವರು, ಭಾವನಾತ್ಮಕವಾಗಿ ತಾನು ಹೆಣ್ಣೆಂದುಕೊಂಡವರು ಎಲ್ಲ ತರಹದ ಹೆಣ್ಮಕ್ಕಳಿದ್ದಾರೆ. ಒಂದು ಹೆಣ್ಣುಮಗುವನ್ನು ಅವಳ ಮನಸು ಎಷ್ಟೋ ಅಷ್ಟೇ ದೇಹವೂ, ಸಮಾಜವೂ ರೂಪಿಸುತ್ತವೆ. ಆದರೆ ಮನುಷ್ಯ ಸಮಾಜದಲ್ಲಿ ಹೆಣ್ಣು ಎನ್ನುವುದೇ ಆ ಕುಲದ ಹಲವಾರು ಸಮಸ್ಯೆಗಳಿಗೆ ಕಾರಣವಾಗಿದೆ.

ಹೆಣ್ಣಿನ ದೇಹ ರಚನೆ, ಅದರ ಕೆಲಸಕಾರ್ಯಗಳು ತುಂಬ ವಿಶೇಷವಾದಂಥವು. ಅವಳ ಬಹುಪಾಲು ಅಂಗಾಂಗಗಳು, ದೇಹದ ಕೆಲಸಕಾರ್ಯಗಳು ವಿಶಿಷ್ಟವಾಗಿ ರೂಪುಗೊಂಡಿರುವಂಥವು. ಅವಳ ದೇಹದಲ್ಲಿ ನಡೆಯುವ ಹಲವಾರು ವಿಶಿಷ್ಟ ಪ್ರಕ್ರಿಯೆಗಳಲ್ಲಿ ಮುಟ್ಟು ಕೂಡಾ ಒಂದು. ಪುಟ್ಟ ಹುಡುಗಿ ದೊಡ್ಡವಳಾಗುವಾಗ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗಳು ಸಂಭವಿಸುತ್ತವೆ. ಅದನ್ನೇ ಋತುಚಕ್ರ ಅಥವಾ ಮುಟ್ಟು ಎನ್ನುತ್ತೇವೆ.

ಹೆಣ್ಣಿನ ದೇಹದಲ್ಲಿ ಪ್ರತಿ ತಿಂಗಳು ನಿಯಮಿತವಾಗಿ ಒಂದು ಅಂಡ ಬಿಡುಗಡೆ ಹೊಂದುತ್ತದೆ. ನಂತರ ಗರ್ಭ ಕಟ್ಟಲು ಗರ್ಭಕೋಶವು ತಯಾರಿ ನಡೆಸುತ್ತದೆ. ಹಾಗಾಗದಿದ್ದಲ್ಲಿ ತಿಂಗಳ ಕೊನೆಗೆ ಗರ್ಭಕೋಶದ ಒಳಪದರವು ರಕ್ತಸ್ರಾವದಲ್ಲಿ ಕಳಚಿಕೊಳ್ಳುತ್ತದೆ. ಇವಿಷ್ಟು ಒಂದು ಋತುಚಕ್ರದ ಅವಧಿಯಲ್ಲಿ ನಡೆಯುವ ಕ್ರಿಯೆಗಳು. ಋತುಚಕ್ರ ಶುರುವಾಗುವ ಸರಾಸರಿ ವಯಸ್ಸು 10ರಿಂದ 18 ವರ್ಷಗಳು. ಮನುಷ್ಯ ಸಂತತಿ ಉಳಿಯಲು, ಹೆಣ್ಣು ದೇಹದ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯಲು ಮುಟ್ಟು ಅನಿವಾರ್ಯ. ಜೊತೆಗೇ ಇದೊಂದು ಅತ್ಯಂತ ನೈಸರ್ಗಿಕ ಕ್ರಿಯೆಯೂ ಹೌದು.

ಆದರೆ ಇಷ್ಟು ಸಹಜ ಪ್ರಕ್ರಿಯೆಯಾದ ಮುಟ್ಟಿನ ಹೆಸರು ಹೇಳಿ ಹೆಣ್ಣುಮಕ್ಕಳನ್ನು ಎಂದಿನಿಂದಲೂ ವಂಚಿಸಲಾಗುತ್ತಿದೆ. ಮುಟ್ಟಿನ ಬಗ್ಗೆ ಇಲ್ಲಸಲ್ಲದ ತಪ್ಪು ಕಲ್ಪನೆಗಳು ಅನೇಕ ಮೌಢ್ಯಾಚರಣೆಗಳಿಗೆ ಕಾರಣವಾಗಿವೆ. ಆ ಮೂರು ದಿನ ಹೆಣ್ಮಕ್ಕಳನ್ನು ಮನೆಯ ಹೊರಗೆ ಕೂರಿಸಿ, ದೇವರು–ಊಟದ ಮನೆಗೆ ಬರದ ಹಾಗೆ, ಅಷ್ಟೇ ಅಲ್ಲ ಕೆಲವು ಗ್ರಾಮಗಳಲ್ಲಿ ಊರಿಗೇ ಬರದ ಹಾಗೆ ಹೊರಗಿಡುವ ಪರಿಪಾಠವಿದೆ. ಪವಿತ್ರ ಕಾರ್ಯ, ಹಬ್ಬಹರಿದಿನಗಳು ನಡೆಯುವ ವೇಳೆ ಮುಟ್ಟು ಬರುವ ದಿನವನ್ನು ಹಿಂದೆ–ಮುಂದೆ ಮಾಡುವ ಮಾತ್ರೆ ತೆಗೆದುಕೊಳ್ಳುವಂತೆ ಒತ್ತಡ ಹೇರಲಾಗುತ್ತದೆ. ಅವೆಲ್ಲ ಹೆಣ್ಮಕ್ಕಳ ಆರೋಗ್ಯಕ್ಕೆ ಅಪಾಯಕರವಾಗಿವೆ. ಈ ಆಧುನಿಕ ಕಾಲದಲ್ಲಿ, ಮಹಿಳೆ ಬಾಹ್ಯಾಕಾಶ ಯಾನ ಮಾಡಿಬಂದ ಮೇಲೂ, ಸಮಾನ ಅವಕಾಶ–ಹಕ್ಕುಗಳನ್ನು ಕಾನೂನಾತ್ಮಕವಾಗಿ ಪಡೆದಿದ್ದಾಗಲೂ ಧರ್ಮ–ದೇವರ ಕಾರಣ ಹೇಳಿ ಮುಟ್ಟಿನ ಹೆಸರಿನಲ್ಲಿ ಅವಳನ್ನು ಹೊರಗಿಡುವುದು ಅನ್ಯಾಯವೂ ಆಗಿದೆ.

**ಯೋಚಿಸಿ:**

- ಮುಟ್ಟಾದಾಗ ಅಶುದ್ಧ ಎನ್ನುವುದೇ ಹೆಣ್ಣಿನ ಕುರಿತ ಎಲ್ಲ ಕೀಳು ಭಾವನೆ, ತಾರತಮ್ಯಕ್ಕೆ ಮೂಲ ಕಾರಣವಾಗಿದೆ. ಮುಟ್ಟು ಎನ್ನುವುದು ದೇವರೇ ಸೃಷ್ಟಿಸಿರುವ ದೇಹದ ಪವಿತ್ರ ಕ್ರಿಯೆ. ಹಾಗಿರುವಾಗ ಋತುಮತಿಯಾದ ದಿನಗಳಲ್ಲಿ ಹೆಣ್ಣು ಪೂಜಾರ್ಹಳಲ್ಲವೆ?
- ಮುಟ್ಟಾದ ಹೆಣ್ಣು ಹೊರಗೆ ಕೂರಬೇಕೆಂದು, ಅಪವಿತ್ರಳೆಂದು ಯಾವ ಧರ್ಮಗ್ರಂಥವೂ ಹೇಳಿಲ್ಲ. ಆ ದಿನಗಳಲ್ಲಿ ದೇವಾಲಯ ಪ್ರವೇಶ ಮಾಡಬಾರದೆಂದು ಯಾವ ದೇವರೂ, ಧರ್ಮಗ್ರಂಥವೂ ಕಟ್ಟಳೆ ವಿಧಿಸಿಲ್ಲ. ಎಂದರೆ ಇದು ಹೆಣ್ಣುಮಕ್ಕಳನ್ನು ರಾಜಕೀಯ, ಸಾಮಾಜಿಕ, ಧಾರ್ಮಿಕವಾಗಿ ಹೊರಗಿಡಲು ಸಮಾಜ ನಡೆಸಿರುವ ಹುನ್ನಾರವಲ್ಲವೆ?
- ಮುಟ್ಟಾದವರನ್ನು ಮುಟ್ಟಿದರೆ, ಅಂಥವರು ಮಗುವನ್ನು ಮುಟ್ಟಿದರೆ ರೋಗ ಬರುವುದೆನ್ನುವುದು ಸಂಪೂರ್ಣ ಸುಳ್ಳು. ಆಸ್ಪತ್ರೆ, ಬ್ಯಾಂಕು, ಕಾರ್ಖಾನೆ, ಶಾಲೆ ಕಾಲೇಜು, ಹೋಟೆಲು, ಕಚೇರಿಗಳಲ್ಲಿ ಹೆಣ್ಣುಮಕ್ಕಳಿಗೆ ತಿಂಗಳಲ್ಲಿ ಮೂರು ದಿನ ರಜೆ ಕೊಡುವರೆ? ಅನ್ನ-ಜ್ಞಾನ-ಅಧಿಕಾರ ಕೊಡುವ ಸ್ಥಳಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ ಅಪವಿತ್ರವೆನಿಸದ ಮುಟ್ಟು ಮನೆ-ದೇವಾಲಯಗಳಲ್ಲಿ ಮಾತ್ರ ಅಪವಿತ್ರವೆನಿಸುವುದು ಹೇಗೆ?
- ಮುಟ್ಟಾದಾಗ ಮುಟ್ಟಬಾರದು ಎಂಬ ಕಲ್ಪನೆ ಹೆಣ್ಣಿಗೆ ವಿರಾಮ ನೀಡಲೆಂದು ಹುಟ್ಟಿದ್ದಲ್ಲ. ಅಷ್ಟಕ್ಕೂ ಅವಳು ಆರಾಮ ತೆಗೆದುಕೊಳ್ಳುವುದಾದರೆ ಹೊರಗೇಕೆ ಕೂರಬೇಕು? ತನ್ನ ಮನೆಯೊಳಗೇ ಆರಾಮ ತೆಗೆದುಕೊಳ್ಳಬಹುದಲ್ಲವೆ? ಮನೆಯ ಹೊರಗೆ, ಹೊರಜಗುಲಿಯಲ್ಲಿ, ಊರ ಹೊರಗೆ ವಿರಾಮ ಕೊಡುವುದು ಏಕೆ?

ಇದೆಲ್ಲದರಿಂದ ತಿಳಿಯುವುದೇನೆಂದರೆ ಮುಟ್ಟಿನ ದಿನಗಳಲ್ಲಿ ಆಚರಿಸಿಕೊಂಡು ಬಂದಿರುವ ಹೊರಗಿಡುವಿಕೆಯು ಹೆಣ್ಣನ್ನು ಅವಕಾಶದಿಂದ, ಅವಳ ಸ್ಥಾನದಿಂದ ವಂಚಿಸುವ ಪ್ರಯತ್ನವೇ ಹೊರತು ಮತ್ತೇನಲ್ಲ. ವಿಪರ್ಯಾಸವೆಂದರೆ ಶಿಕ್ಷಿತಳಾದ, ಉದ್ಯೋಗಸ್ಥಳಾದ, ಅಧಿಕಾರದ ಸ್ಥಳಗಳಲ್ಲಿರುವ ಮಹಿಳೆಯರೂ ಮುಟ್ಟಿಗೆ ಸಂಬಂಧಪಟ್ಟ ಮೌಢ್ಯಗಳ ಮುಂದುವರೆಸುತ್ತಿದ್ದಾರೆ.

ಭಾರತ ಸಂವಿಧಾನ ದೇಶದ ಪ್ರತಿ ಪ್ರಜೆಗೂ ಸಮಾನ ಧಾರ್ಮಿಕ-ರಾಜಕೀಯ-ಸಾಮಾಜಿಕ ಹಕ್ಕುಗಳನ್ನು ನೀಡಿದೆ. ಹಾಗಾಗಿ ಬಂಧುಗಳೇ, ಬನ್ನಿ, ಮುಟ್ಟು ಎಂಬ ಪ್ರಕೃತಿ ಸಹಜ ಕ್ರಿಯೆಯು ಮಹಿಳಾ ಹಕ್ಕುಗಳನ್ನು ಮೊಟಕುಗೊಳಿಸಲು ಬಿಡದಿರೋಣ. ದೇಹ-ಆರೋಗ್ಯಗಳ ಕುರಿತ ವೈಜ್ಞಾನಿಕ ಅರಿವನ್ನು ಬಿತ್ತೋಣ.

*ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ/ಮುಟ್ಟಿನಿಂದಲ್ಲವೆ ನಮ್ಮೆಲ್ಲರ ಹುಟ್ಟು?*
*ಮುಟ್ಟು ಮುಟ್ಟೆಂದೇಕೆ ಕೀಳರಿಮೆ ಹೊಂದುವಿರಿ/ಮುಟ್ಟಲ್ಲವೆ ನಮ್ಮ ಸೃಷ್ಟಿಯ ಗುಟ್ಟು?*

*ಮುಟ್ಟು ಕಾಣದ ಹೆಣ್ಣು ಬಸಿರು ಹೊಂದುವುದಿಲ್ಲ/ತಾಯಿಯಾಗುವುದಿನ್ನು ಸಾಧ್ಯವೇನು?*
*ನಮ್ಮನ್ನು ಹೆತ್ತವಳು ಮುಟ್ಟಾಗದಿರುತಿದ್ರೆ/ಭೂಮಿಯಲಿ ನಾವು ಇರುತಿದ್ದೇವೇನು?*

*ಮುಟ್ಟು ಸ್ರಾವಗಳೆಲ್ಲ ಪ್ರಕೃತಿಯ ಸಹಜ ಕ್ರಿಯೆ/ಬೆವರು ಬಾಧೆಗಳಂತೆ ಅಲ್ಲವೇನು?*
*ಮುಟ್ಟಾದ ಹೆಣ್ಣನ್ನು ದೂರ ಅಟ್ಟುವುದೇಕೆ/ಅವಳು ಮಾಡಿದ ಘೋರ ಪಾಪವೇನು?*

*ಜಗದ ಜೀವಿಗಳೆಲ್ಲ ದೈವಸೃಷ್ಟಿಯಾದಂತೆ/ಮುಟ್ಟು ಕೂಡ ಪವಿತ್ರ ಹೌದು ತಾನೆ?*
*ದೇವರದೆ ಸೃಷ್ಟಿಯು ಶುಭದಾ ಕಾರ್ಯಗಳಲ್ಲಿ/ವರ್ಜ್ಯ ಅನ್ನುವುದೆಲ್ಲ ತಪ್ಪು ತಾನೆ?*

*ಮುಟ್ಟಿನ ಕುರಿತಾಗಿ ಸತ್ಯ ಸಂಗತಿ ಅರಿತು/ಹೊಸ ದೃಷ್ಟಿಯನು ನಾವು ಹೊಂದಬೇಕು*
*ಕುರುಡು ನಂಬಿಕೆಗಳನು ಇಲ್ಲವಾಗಿಸಿ ನಾವು/ಮಾನವೀಯತೆಯಿಂದ ಬದುಕಬೇಕು*

(ಶ್ರೀನಿವಾಸ ಕಾರ್ಕಳ ಅವರ ಕವಿತೆ)

**ಮುಟ್ಟು ಕುರಿತ ತಪ್ಪು ಕಲ್ಪನೆಗಳ ದೂರಮಾಡಿ.**
**ಮುಟ್ಟಿನ ಹೆಸರಿನ ತಾರತಮ್ಯದ ವಿರುದ್ಧ ಮಾತನಾಡಿ.**

---